# ಅವಕಾಶದ ಗಣಿತ

ನಾಲ್ಕು ವರ್ಷದ ಹಿಂದಿನ ಮಾತು. ವೇದಿಕೆ ಮೇಲೆ ಕೂತಿದ್ದ ಸಿನಿಮಾಕರ್ಮಿಗಳೆಲ್ಲಾ ಹೊಸಬರೇ. ಕಾಮನ ಕಥೆಯನ್ನು ಆಧುನಿಕ ಕಾಲದ ಚೌಕಟ್ಟಿನಲ್ಲಿ ಹೇಳುವಂಥ ಸಿನಿಮಾ ಮಾಡಲು ಅವರೆಲ್ಲಾ ಹೊರಟಿದ್ದರು. ಕಾಮನ ಪಾತ್ರಧಾರಿ ಒರಟೊರಟು ಮುಖದವರು. ನಿರ್ಮಾಪಕರೂ ಹೊಸಬರೇ. ರಂಗಭೂಮಿಯಲ್ಲಿ ಪಳಗಿದ್ದ ಅವರಿಗೆ ಸಿಕ್ಕಿದ್ದ ನಾಯಕಿ ಮಾತ್ರ ಎಲ್ಲರ ನಡುವೆ ಎದ್ದುಕಾಣುವಂಥವರು. 'ಬೈ ಟೂ ಕಾಫಿ' ಎಂಬ ಸಿನಿಮಾ ಮೂಲಕ ಬಣ್ಣಹಚ್ಚುವ ಅವಕಾಶ ಪಡೆದ ಆ ನಟಿ ಆಗಿನ್ನೂ ಹುಡುಗಿ. ಹನ್ನೆರಡನೇ ಇಯತ್ತೆ ಪರೀಕ್ಷೆಯನ್ನು ಆಗಷ್ಟೇ ಬರೆದು ಮುಗಿಸಿ, ಫಲಿತಾಂಶವನ್ನು ಎದುರುನೋಡುತ್ತಿದ್ದರು. ತರುಣ್ ತೆಹಲ್ಯಾನಿ ತರಹದ ಹೆಸರಾಂತ ವಿನ್ಯಾಸಕರ ಕಣ್ಣಿಗೆ ಬಿದ್ದಾಗಿತ್ತು. ಹಾಗಾಗಿ ಮಾಡೆಲ್ ಎಂಬ ಹಣೆಪಟ್ಟಿ ಮೆತ್ತಿಕೊಂಡಿತ್ತು. ಹೊಂಬಣ್ಣ, ನೀಳಕಾಯ ರೂಪದರ್ಶಿಗೆ ಹೇಳಿಮಾಡಿಸಿದಂತಿತ್ತು. ಅಂಥ ನಟಿ ಹೊಸ ಚಿತ್ರತಂಡದ ಕೈಗೆ ಸಿಕ್ಕಿದ್ದು ಕೂಡ ರ್‍ಯಾಂಪ್ ಅನುಭವದಿಂದಲೇ.

ಆ ಸಿನಿಮಾದ ಚಿತ್ರೀಕರಣ ಭರದಿಂದ ಸಾಗಲಿಲ್ಲ. ಆದರೆ, ಬಿಡುಗಡೆಯಾದ ಕೆಲವು ಸ್ಟಿಲ್‌ಗಳು ಮಾದಕವಾಗಿದ್ದವು. ನಟಿಯಾಗಿದ್ದ ಹುಡುಗಿ ನಿಸ್ಸಂಕೋಚವಾಗಿ ತಮ್ಮ ಉದರಭಾಗವನ್ನು ತೋರಿಸುತ್ತಾ, ಸರಸ ಭಂಗಿಗಳಲ್ಲಿ ನಗುನಗುತ್ತಾ ಪೋಸ್ ಕೊಟ್ಟಿದ್ದರು. ಮೊದಲ ಸುದ್ದಿಗೋಷ್ಠಿಯಲ್ಲಿ ಹುಡುಗಿ ಇಂಗ್ಲಿಷ್‌ನಲ್ಲಿ ಆಡಿದ ಮಾತುಗಳ ಸಾರ ಇಷ್ಟು: 'ಗಣಿತ ನನಗೆ ಕಷ್ಟ. ಹಾಗಾಗಿ ಲೆಕ್ಕಾಚಾರದಲ್ಲಿ ಪಳಗಿಲ್ಲ. ನನ್ನ ಸಂಭಾವನೆ ವಿಷಯವನ್ನು ಅಮ್ಮ ನೋಡಿಕೊಳ್ಳುತ್ತಾರೆ'. ಹನ್ನೆರಡನೇ ಇಯತ್ತೆಯ ಫಲಿತಾಂಶದ ಕುರಿತು ಕಿಂಚಿತ್ತೂ ನಿರೀಕ್ಷೆ ಇಟ್ಟುಕೊಳ್ಳದ ಆ ನಟೀಮಣಿ ಎಷ್ಟು ಲೆಕ್ಕಾಚಾರಸ್ಥೆ ಎಂಬುದು ಆ ಗೋಷ್ಠಿಯಲ್ಲೇ ಬಯಲಾಗಿತ್ತು.

ನಟೀಮಣಿಯ ಒಂದೆರಡು ಚಿತ್ರಗಳು ತೆರೆಕಂಡವು. ಅಭಿನಯ ಅಷ್ಟಕ್ಕಷ್ಟೇ ಎಂಬುದು ಗೊತ್ತಾಯಿತು. ಆದರೆ, ನೀಳಕಾಯ, ಹೊಂಬಣ್ಣ ಹಾಗೂ ಮುಕ್ತವಾಗಿ ಮಾತನಾಡುವ ಪರಿ ಅವರಿಗೆ ವರದಾನವಾದವು. ಜಾಣ ಮಾಡೆಲ್‌ಗೆ ಇರಬಹುದಾದ ಸಂಪರ್ಕಾಧಿಕಾರಿಯ ಗುಣವೂ ಆಕೆಗೆ ಸಿದ್ಧಿಸಿತ್ತು. ಹಾಗಾಗಿ ಅವರು ಆಯ್ದ ಸುದ್ದಿಮಿತ್ರ/ಮಿತ್ರೆಯರಿಗೆ 'ಗುಡ್ ಮಾರ್ನಿಂಗ್', 'ಗುಡ್ ಈವ್ನಿಂಗ್' ಮೆಸೇಜುಗಳನ್ನು ಅನೂಚಾನವಾಗಿ ಕಳುಹಿಸುತ್ತಾ ಬಂದರು. ಆ ಮೆಸೇಜುಗಳ ನಡುವೆಯೇ ಅವರ ಹೊಸ ಹೊಸ 'ಅಸೈನ್ ಮೆಂಟು', 'ಕನ್‌ಸೈನ್‌ಮೆಂಟು'ಗಳ ಸುದ್ದಿಯನ್ನೂ ಪ್ರಜ್ಞಾಪೂರ್ವಕವಾಗಿ ಲೀಕ್ ಮಾಡಿದರು. ನೋಡಲು ಸಪೂರವಾಗಿರುವ, 'ಹೇಳಮ್ಮಾ...', 'ಓಕೆ ಗುರು' ಎಂದು ಎಂಥವರನ್ನೂ ಸಲಿಗೆಯಿಂದ ಮಾತನಾಡಿಸುವ ನಟೀಮಣಿಯ ಎದುರು ನೋಡನೋಡುತ್ತಲೇ ಅವಕಾಶಗಳ ಸಾಲು. ಹೊಸ ಮಳಿಗೆ ಉದ್ಘಾಟನೆಗೆ ಟೇಪು ಕತ್ತರಿಸುವವರ್‍ಯಾರು ಎಂಬ ಪ್ರಸ್ತಾಪ ಬಂದಾಗಲೂ ಆದ್ಯತೆ. ಇಷ್ಟೆಲ್ಲಾ ಪ್ರಚಾರ ಹಾಗೂ ಅವಕಾಶಗಳ ಭರಾಟೆಯ ನಡುವೆಯೂ ನಟೀಮಣಿ ಅಭಿನಯವನ್ನು ಅಷ್ಟಾಗಿ ಕಲಿಯಲಿಲ್ಲ. ತಮ್ಮ ಗ್ಲಾಮರ್ ಒಂದರಿಂದಲೇ ಸಿನಿಮಾ ಓಡಿಸಬಲ್ಲ ತಾಕತ್ತು ಇಲ್ಲವೆಂಬುದನ್ನೂ ಒಮ್ಮೆ ಅವರೇ ಒಪ್ಪಿಕೊಂಡಿದ್ದರು. ತಮಗಿಂತ ಅರ್ಧ ಅಡಿ ಕುಳ್ಳಗಿರುವ ಸ್ಟಾರ್‌ಗಳ ಜೊತೆ ಅಭಿನಯಿಸಲು ಕೂಡ ಹಿಂದೇಟು ಹಾಕದ ಅವರು ಕೆಲವು ವಿಷಯಗಳಲ್ಲಿ ಉದಾರಿ. ಈಗ ಅವರದ್ದೇ ಹೆಸರಿನ ಸಿನಿಮಾ ಚಿತ್ರೀಕರಣ ನಡೆಯುತ್ತಿದೆ. ಅದರ ನಿರ್ಮಾಪಕರು ಮುಖದ ತುಂಬಾ ನಗುತ್ತಿದ್ದಾರೆ. ನಟೀಮಣಿಗೆ ಈಗೀಗ ಗಣಿತವಷ್ಟೇ ಅಲ್ಲದೆ ಗಾಂಧಿನಗರದ 'ರಾಸಾಯನಶಾಸ್ತ್ರ' ಕೂಡ ಚೆನ್ನಾಗಿ ಅರ್ಥವಾಗುತ್ತಿದೆ.

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68